ಕಲ್ಲಿಗೆ ಭದ್ರವಾಗಿ ಅಂಟಿಕೊಳ್ಳುವಲ್ಲಿ ಈ ಪ್ರೊಪೊಲಿಸ್‌ನ ಪಾತ್ರವೂ ಇದೆ. ಪ್ರೋಪೋಲಿಸ್‌ಗೆ ಅನೇಕ ಔಷಧೀಯ ಗುಣಗಳಿವೆ. ಇದು ಇಡೀ ಜೇನುಗೂಡನ್ನು ಬ್ಯಾಕ್ಟೀರಿಯ – ಶಿಲೀಂಧ್ರಗಳಿಂದ ರಕ್ಷಿಸುತ್ತದೆ. ಈ ವಿಶೇಷ ವಸ್ತು ಜೇನುತುಪ್ಪದಲ್ಲೂ ಬೆರೆತಿರುವುದರಿಂದ ಜೇನುತುಪ್ಪಕ್ಕೆ ಅನೇಕ ಔಷಧಿ ಗುಣಗಳಿವೆ. ಶುದ್ಧವಾದ ಜೇನುತುಪ್ಪ ಕೆಡುವ ಪ್ರಶ್ನೆಯೇ ಇಲ್ಲ. ಈಜಿಪ್ಟ್‌ನ ಪಿರಮಿಡ್‌ಗಳಲ್ಲಿ ಸಾವಿರಾರು ವರ್ಷದ ಹಿಂದೆ ಇರಿಸಲಾಗಿದ್ದ ಜೇನುತುಪ್ಪದ ಜಾಡಿಯನ್ನು ತೆಗೆದು ನೋಡಿದರೆ ಅದರಲ್ಲಿನ ಜೇನುತುಪ್ಪ ಕೆಟ್ಟಿರಲಿಲ್ಲ, ಸ್ವಲ್ಪ ಕಂದು ಬಣ್ಣಕ್ಕೆ ತಿರುಗಿತ್ತು, ಅಷ್ಟೆ!

ಜೇನುಹುಳುಗಳು ಈ ಭೂಮಿಗೆ ನಮಗಿಂತ ಬಹಳ ಮೊದಲೇ ಬಂದಿವೆ. ಹೋಮೋಸೆಪಿಯನ್ ಜಾತಿಯ ಮನುಷ್ಯ ಈ ಭೂಮಿಗೆ ಬಂದು ಐವತ್ತು ಸಾವಿರ ವರ್ಷಗಳಾಗಿರಬಹುದು, ಅಷ್ಟೆ. ಆದರೆ, ಜೇನುಹುಳುಗಳು ಒಂದೂವರೆ ಕೋಟಿ ವರ್ಷಗಳಿಂದಲೂ ಈ ಭೂಮಿಯ ಮೇಲೆ ಬದುಕಿ ಬಾಳುತ್ತಿವೆ. ಕೆಲವು ಪಳೆಯುಳಿಕೆಗಳನ್ನು ಆಧರಿಸಿ ಹೇಳುವುದಾದರೆ ಇವು ಡೈನೋಸಾರ್‌ಗಳ ಜೊತೆಜೊತೆಗೇ ಇದ್ದಿದ್ದು ಕಂಡು ಬರುತ್ತದೆ. ಇಷ್ಟು ಪ್ರಾಚೀನ ಕಾಲದಿಂದಲೂ ನಿರಂತರವಾಗಿ ಇವು ಹೂವುಗಳ ಪರಾಗ ಸ್ಪರ್ಶ ಮಾಡುತ್ತ ಭೂಮಿಯನ್ನು ಹಸಿರಿನಿಂದ ನಳನಳಿಸುವಂತೆ ಮಾಡಿವೆ. ಆದರೆ, ಇಂದು ಕೀಟನಾಶಕಗಳ ಹಾವಳಿಯಿಂದಾಗಿ ಜೇನುನೊಣಗಳ ಸಂಖ್ಯೆ, ಗೂಡುಗಳ ಸಂಖ್ಯೆ ಇಳಿಮುಖವಾಗಿದೆಯಂತೆ. ಬೆಟ್ಟದ ಜೇನುಗಳು ಬೇಸಿಗೆಯಲ್ಲಿ ಕಾಡು ಒಣಗಿದಾಗ ಕೆಳಗೆ ಹಾರಿ ಬಂದು ವ್ಯವಸಾಯದ ಬೆಳೆಗಳಾದ ಹುಚ್ಚೆಳ್ಳು ಮುಂತಾದ ಹೂಗಳ ಮಕರಂದ ಕುಡಿದು ಹೇಗೋ ಬದುಕಿಕೊಂಡಿರುತ್ತವೆ. ಆದರೆ, ಇತ್ತೀಚೆಗೆ ಬೆಳೆಗಳ ವೈವಿಧ್ಯದಲ್ಲಿ ವಿಚಿತ್ರ ಬದಲಾವಣೆಗಳಾಗಿ ಶುಂಠಿ, ಅರಿಸಿನ, ಚೆಂಡು ಹೂಗಳು ನಮ್ಮ ವ್ಯವಸಾಯವನ್ನು ಅತಿಕ್ರಮಣ ಮಾಡಿವೆ. ಚೆಂಡು ಹೂವಿಗೆ ಸಿಂಪಡಿಸಿದ ಕೀಟನಾಶಕಗಳಿಗೆ ಬಹಳಷ್ಟು ಜೇನು ನೊಣಗಳು ಬಲಿಯಾಗುತ್ತಿವೆ. ಜೇನುನೊಣಗಳ ಪರಾಗಸ್ಪರ್ಶವಿಲ್ಲದೆ ನಮ್ಮ ವ್ಯಾವಸಾಯಿಕ ಬೆಳೆಗಳು ಕಾಳುಗಟ್ಟದೆ ಜೊಳ್ಳಾಗುತ್ತವೆ. ಮನುಷ್ಯರಿಲ್ಲದೆ ಪ್ರಕೃತಿ ಸಮೃದ್ಧವಾಗಿಯೇ ಮುಂದುವರಿಯಬಲ್ಲುದು, ಆದರೆ ಜೇನ್ನೊಣಗಳಿಲ್ಲದೆ ಮನುಷ್ಯ ಬೆಳೆ ಬೆಳೆದು ಬದುಕಿ ಬಾಳುವುದು ಕಷ್ಟವೇ ಸರಿ!


## ಜಿ.ಎಸ್. ಜಯದೇವ

1973ರ ಸುಮಾರಿಗೆ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಜೀವಶಾಸ್ತ್ರದಲ್ಲಿ ಎಂ.ಎಸ್ಸಿ. ಪದವಿ ಪಡೆದು, ಬಳಿಕ ಚಾಮರಾಜನಗರದ ಜೆ.ಎಸ್.ಎಸ್. ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದರು. ಬಳಿಕ ಕೆಲಸಕ್ಕೆ ರಾಜೀನಾಮೆ ಕೊಟ್ಟು, ಚಾಮರಾಜನಗರದಲ್ಲಿ ಶಾಲಾ ಮಕ್ಕಳಿಗೆ ಕನ್ನಡ, ವಿಜ್ಞಾನ ಮತ್ತು ಗಣಿತ ಕಲಿಸುತ್ತಿದ್ದಾರೆ. ಅನಾಥ ಮಕ್ಕಳ ಪುನರ್ವಸತಿಯ ಕೆಲಸ ಮಾಡುತ್ತಲೇ ಬಿಳಿಗಿರಿರಂಗನ ಬೆಟ್ಟದಲ್ಲಿ ಬುಡಕಟ್ಟು ಸಮೂಹಗಳೊಂದಿಗೆ ಒಡನಾಟವಿಟ್ಟುಕೊಂಡಿದ್ದಾರೆ.

ತಮ್ಮ 'ದೀನಬಂಧು' ಸಂಸ್ಥೆಯ ಮೂಲಕ ಈವರೆಗೆ ತಾವು ಒಡನಾಡಿದ ಬಿಳಿಗಿರಿರಂಗನ ಬೆಟ್ಟದ ಸೋಲಿಗರೊಂದಿಗಿನ ನೆನಪುಗಳನ್ನು, ಡಾ. ಸುದರ್ಶನ್ ಅವರೊಂದಿಗೆ ಸೋಲಿಗರ ಜೀವನದ ಸುಧಾರಣೆಗಾಗಿ ಕೆಲವು ವರ್ಷಗಳ ಕಾಲ ಒಡನಾಡಿದ ಪರಿಯನ್ನು 'ಸೋಲಿಗ ಚಿತ್ರಗಳು' (ಆದಿವಾಸಿಗಳ ಬದುಕಿನೊಂದಿಗಿನ ಸ್ಮೃತಿಚಿತ್ರಗಳು) ಪುಸ್ತಕದಲ್ಲಿ ದಾಖಲಿಸಿದ್ದಾರೆ.